International Journal of Kannada Research 2019; 5(4): 22-27

International Journal of Kannada Research
www.kannadajournal.com

ISSN: 2454–5813
IJKR 2019; 5(4): 22-27
© 2019 IJKR
www.kannadajournal.com
Received: 19-08-2019
Accepted: 21-09-2019

**ಶೃಂಗಾರ್. ಕೆ.ಎಸ್**
ಸಂಶೋಧಕರು
ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು–06

**Corresponding Author:**
**ಶೃಂಗಾರ್. ಕೆ.ಎಸ್**
ಸಂಶೋಧಕರು
ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು–06

# ಭಾರತದಲ್ಲಿ ರಾಜಕೀಯ ಮೀಸಲಾತಿಯ ಐತಿಹಾಸಿಕ ಹಿನ್ನಲೆ

**ಶೃಂಗಾರ್ ಕೆ.ಎಸ್**

**ಪೀಠಿಕೆ.**
ಪೂರ್ವದಿಂದಲೂ ತುಳಿತಕ್ಕೆ ಒಳಗಾದವರ ಹಕ್ಕುಗಳಿಗಾಗಿ ಭಾರತರತ್ನ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್‌ರವರ ಸಂವಿಧಾನಾತ್ಮಕ ಹೋರಾಟವು ಭಾರತ ದೇಶದಲ್ಲಿಯೇ ಒಂದು ಮೈಲುಗಲ್ಲನ್ನು ಸ್ಥಾಪಿಸಲು ಕಾರಣವಾಯಿತು. ನಮ್ಮ ದೇಶವು ಪ್ರಜಾಪ್ರಭುತ್ವ ದೇಶವಾಗಿದೆ. ಅದು ಯಶಸ್ವಿಯಾಗಬೇಕಾದರೆ ಪ್ರಮುಖವಾಗಿ ರಾಜಕೀಯ ಪ್ರಾತಿನಿಧಿತ್ವ ಇದ್ದಾಗ ಮಾತ್ರ ಸಾಧ್ಯ. ಭಾರತ ದೇಶವು ಹಲವಾರು ಜಾತಿ, ವರ್ಗ, ಧರ್ಮ, ಭಾಷೆಯಂತಹ ವ್ಯವಸ್ಥೆಯನ್ನು ಹೊಂದಿದೆ, ಅವುಗಳಲ್ಲಿ ಜಾತಿಯಾಧಾರಿತ ಪ್ರಾತಿನಿಧಿತ್ವ ತರುವುದು ಪ್ರಜಾಪ್ರಭುತ್ವದ ಅಡಿಪಾಯವಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರಾಜಕೀಯ ಮೀಸಲಾತಿ ಮತ್ತು ಹಕ್ಕುಗಳ ಉಗಮಕ್ಕೆ ಕಾರಣೀಭೂತ ವಿಷಯಗಳನ್ನು ತಿಳಿಸುವ ಮೂಲಕ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಒದಗಿಸಲಾಗಿದೆ, ಅಸ್ಪೃಶ್ಯರ ವಿಮೋಚನೆಗೆ ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್‌ರವರು "ರಾಜಕೀಯ ಅಧಿಕಾರವೊಂದೇ ಕೀಲಿ ಕೈ" ಎಂಬುದನ್ನು ತಿಳಿದು ಸ್ವತಂತ್ರ ಪೂರ್ವದ ರಾಜಕೀಯ ಮೀಸಲಾತಿಗೆ ಹೋರಾಟ ನಡೆಸಿದ ಮೈಸೂರು ಸಂಸ್ಥಾನದ ನವ ನಿರ್ಮಾತೃರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಪ್ರಜಾಪ್ರತಿನಿಧಿ ಸಭೆ, ಸೌತ್ ಬರೋ ಸಮಿತಿ (1918), ಸೈಮನ್ ಆಯೋಗ–1927, ದುಂಡು ಮೇಜಿನ ಸಮ್ಮೇಳನಗಳು–1930–31–32 ಮತ್ತು ಲೋಧಿಯಾನ್ ಸಮಿತಿ–1931 ಹಾಗೂ ಅಸ್ಪೃಶ್ಯರ ರಾಜಕೀಯ ಸ್ವತಂತ್ರಕ್ಕೆ ಪೂರಕವಾದ 1932ರ ಪೂನಾ ಒಪ್ಪಂದದಲ್ಲಿ ನಡೆದಿರುವ ವಿಷಯಗಳು ರಾಜಕೀಯ ಮೀಸಲಾತಿಗೆ ಸಂಬಂಧಿಸಿರುತ್ತದೆ.

**ಉದ್ದೇಶಗಳು**

- ಭಾರತದಲ್ಲಿ ರಾಜಕೀಯ ಮೀಸಲಾತಿಯು ಬೆಳೆದು ಬಂದ ದಾರಿಯನ್ನು ತಿಳಿಯುವುದು.
- ಅಸ್ಪೃಶ್ಯರ ರಾಜಕೀಯ ವಿಮೋಚನೆಗೆ ಮೀಸಲು ಕ್ಷೇತ್ರಗಳ ಉಗಮವನ್ನು ಅವಲೋಕಿಸುವುದು.
- ಅಸ್ಪೃಶ್ಯರ ರಾಜಕೀಯ ಹಕ್ಕುಗಳ ಸಂವಿಧಾನಿಕ ರಕ್ಷಣೆಗಳ ಬಗ್ಗೆ ತಿಳಿಯುವುದು
- ಪ್ರಸ್ತುತ ರಾಜಕೀಯ ಮೀಸಲಾತಿಯ ಸ್ಥಿತಿಗತಿಗಳು ಮತ್ತು ಅಗತ್ಯತೆಗಳನ್ನು ತಿಳಿಯುವುದು

**ಮಹಾರಾಷ್ಟ್ರದ ಕೊಲ್ಲಾಪುರ ಪ್ರಾಂತ್ಯ ಮತ್ತು ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಮೀಸಲಾತಿಯ ಪರಿಕಲ್ಪನೆ**

ಆಧುನಿಕ ಮೈಸೂರು ಸಂಸ್ಥಾನದ ನಿರ್ಮಾತೃವಾದ ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ರಾಜಕೀಯ ಮೀಸಲಾತಿಯ ಹರಿಕಾರರು ಎಂದು ಹೇಳಬಹುದು. ಇವರ ಕಾಲಾವಧಿಗೂ ಮುನ್ನವೇ ಮೀಸಲಾತಿಯನ್ನು ಕುರಿತು ಚರ್ಚೆ ಆರಂಭವಾಗಿರುವುದನ್ನು ಕಾಣಬಹುದಾಗಿದೆ. ಕ್ರಿ.ಶ. 1902ರ ಜುಲೈ 26ರಿಂದೀಚೆಗೆ ಮಹಾರಾಷ್ಟ್ರ ಪ್ರಾಂತ್ಯದ ಕೊಲ್ಲಾಪುರ ಅರಸು ಛತ್ರಪತಿ ಶಾಹು ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಬ್ರಾಹ್ಮಣ ಬನಿಯಾಗಳನ್ನು ಬಿಟ್ಟು ಇನ್ನುಳಿದ ಎಲ್ಲಾ ಹಿಂದುಳಿದ ಜಾತಿಗಳಿಗೆ ಶೇ. 50 ರಷ್ಟು ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡಿದರು. ಇದನ್ನು ಅಂದು ಮಹಾರಾಷ್ಟ್ರದಲ್ಲಿ ಪ್ರಬಲ ಸಂಘಟನೆಯಾಗಿದ್ದ "ಬ್ರಾಹ್ಮಣ ವೃಂದ" ಉಗ್ರವಾಗಿ ವಿರೋಧಿಸಿತ್ತು. ಈ ಸಂಘಟನೆಯ ಮುಂದಾಳಾಗಿದ್ದ ಹಾಗೂ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮಂಚೂಣಿ ನಾಯಕರಾಗಿದ್ದ ಶ್ರೀ ಬಾಲಗಂಗಾಧರ ತಿಲಕರೂ ಕೂಡ ಕಟು ಶಬ್ದಗಳಲ್ಲಿ ಶಾಹು ಮಹಾರಾಜರ ಈ ಕ್ರಮವನ್ನು ಖಂಡಿಸಿದ್ದರು. 'ಈ ರೀತಿ ಜಾತಿ ಆಧಾರದ ಮೇಲೆ ಮೀಸಲಾತಿ ನೀಡಿದರೆ ಆಡಳಿತದ ದಕ್ಷತೆ ಮತ್ತು

ಸಾಮರ್ಥ್ಯ ಹಾಳಾಗುತ್ತದೆ' ಹಾಗೂ "ರಾಜರಾದವರು ಎಲ್ಲರನ್ನೂ ಒಂದೆ ರೀತಿಯಲ್ಲಿ ಕಾಣಬೇಕು. ಕೆಲವರ ಬಗ್ಗೆ ವಿಶೇಷ ಪ್ರೀತಿ ತೋರಿ ಕೆಲವರನ್ನೂ ಕಡೆಗಣಿಸಬಾರದು" ಎಂಬುದು ತಿಲಕರ ವಾದವಾಗಿತ್ತು. ಈ ವಾದವನ್ನಿಟ್ಟಕೊಂಡು ಇವರು ಶಾಹು ಮಹಾರಾಜರು ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡಿದ್ದನ್ನು ಖಂಡಿಸಿದರು.

ಮೈಸೂರು ಪ್ರಾಂತ್ಯದ ನೈಜ ಪ್ರಜಾಪ್ರಭುತ್ವವಾದಿ ಎಂದೇ ಪ್ರಸಿದ್ಧ ಪಡೆದಿರುವ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕರ್ನಾಟಕ ರಾಜಕೀಯ ಸುಧಾರಣೆ ಹರಿಕಾರರು ಆದ ಇವರು ಪ್ರಜಾಪ್ರತಿನಿಧಿ ಸಭೆಯ ಮೂಲಕ ಮತದಾನ ಮತ್ತು ರಾಜಕೀಯ ಪ್ರಾತಿನಿಧ್ಯವನ್ನು ಕಲ್ಪಿಸಿಕೊಟ್ಟರು.

**ಸೌತ್ ಬರೋ ಸಮಿತಿ–1918**

ಭಾರತದ ಇತಿಹಾಸವನ್ನು ಸುಮಾರು 300 ವರ್ಷಗಳ ಕಾಲ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಆಂಗ್ಲರು ಆಳ್ವಿಕೆಯನ್ನು ಮಾಡಿದರು. ಈ ನಾಲ್ಕು ಪರಕೀಯರ ಆಳ್ವಿಕೆಯಲ್ಲಿ ಅತಿ ಹೆಚ್ಚು ನಮ್ಮ ದೇಶವನ್ನು ಆಳಿದವರೆಂದರೆ ಬ್ರಿಟೀಷರು, ಇವರು ನಮ್ಮ ದೇಶಕ್ಕೆ ವ್ಯಾಪಾರದ ದೃಷ್ಠಿಯಿಂದ ಭಾರತಕ್ಕೆ ಆಗಮಿಸಿದ ಯೂರೋಪಿನ ವಸಾಹತುಷಾಯಿ. ನಮ್ಮ ದೇಶದ ಧಾರ್ಮಿಕ ಪದ್ಧತಿ ಮತ್ತು ಜಾತಿ ವ್ಯವಸ್ಥೆಯನ್ನು ಬಂಡವಾಳವಾಗಿ ಮಾಡಿಕೊಂಡು ತನ್ನ ಹಿಡಿತವನ್ನು ಭಾರತೀಯ ಸಂಸ್ಕೃತಿಯ ನೆಲೆದ ಮೇಲೆ ಅಧಿಪತ್ಯವನ್ನು ಸ್ಥಾಪಿಸಲ್ಪಟ್ಟಿತು. ಈ ಒಂದು ವ್ಯವಸ್ಥೆಯನ್ನು ನಮ್ಮ ದೇಶದ ಮಹಾನ್ ಮಾನವತವಾದಿಯಾದ ಡಾ. ಬಿ.ಆರ್ ಅಂಬೇಡ್ಕರ್‌ರವರು ಯುರೋಪಿನ ವಸಾಹತುಷಾಹಿಯನ್ನು ಕಟುವಾಗಿ ವಿರೋಧಿಸುತ್ತಿದ್ದರು. ಇವರು ಅನೇಕ ಸಮ್ಮೇಳನ ಸಮಿತಿ, ಆಯೋಗಗಳ ಮುಂದೆ ತುಳಿತಕ್ಕೆ ಒಳಗಾದವರ ಮತ್ತು ದಮನಿತ ಸಮುದಾಯಗಳ ಹಕ್ಕುಗಳು ಮತ್ತು ಸವಲತ್ತುಗಳಿಗಾಗಿ ಪ್ರಜಾಸತ್ತಾತ್ಮಕವಾದಗಳನ್ನು ಮಂಡಿಸಿ ಪ್ರಪಂಚಕ್ಕೆ ಮಹಾನ್ ಪ್ರಜಾಪ್ರಭುತ್ವವಾದಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಬ್ರಿಟೀಷರು ಭಾರತದ ರಾಜಕೀಯದಲ್ಲಿ ಮತದಾನದ ಹಕ್ಕುಗಳನ್ನು ಈ ಕೆಳಗಿನವರಿಗೆ ನೀಡುತ್ತಿದ್ದರು.

1. **ಜಮೀನ್ದಾರರು 2. ತೆರಿಗೆ ಪಾವತಿದಾರರು 3. ಶೈಕ್ಷಣಿಕ ಅರ್ಹತೆ ಉಳ್ಳವರು**

ಹೀಗೆ ಮತದಾನದ ಹಕ್ಕನ್ನು ನೀಡಲಾಗಿತ್ತು. ಇದನ್ನು ವಿಸ್ತರಿಸುವ ಸಲುವಾಗಿ Hon'ble South Buro ಅಧ್ಯಕ್ಷತೆಯಲ್ಲಿ ಚುನಾವಣಾ ಹಕ್ಕಿನ ಸಮಿತಿ ಮತ್ತು ರಾಜಕೀಯ ಪ್ರಾತಿನಿಧ್ಯ ವರದಿ ನೀಡಲು ಸದಸ್ಯರ ತಂಡವನ್ನು ರಚಿಸಲಾಯಿತು. ಭಾರತದ ಎಲ್ಲಾ ವರ್ಗಗಳಿಗೂ ರಾಜಕೀಯ ಪ್ರಾತಿನಿಧ್ಯ ದೊರೆತಿದಿಯೇ, ಇಲ್ಲವೋ ಎಂದು ತಿಳಿಯಲು ಸಮಿತಿಗೆ ಸೂಚಿಸಿತು. ಈ ಸಮಿತಿಯು ಮುಂದೆ ಡಾ. ಬಿ.ಆರ್ ಅಂಬೇಡ್ಕರ್‌ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾ ನಮ್ಮ ದೇಶದಲ್ಲಿ ಒಟ್ಟು ಜನಸಂಖ್ಯೆ ಶೆ.25% ಇವರು ಅಸ್ಪøಶ್ಯರಿಗೆ ಸರ್ಕಾರ ಯಾವುದೇ ರಂಗಗಳಲ್ಲೂ ಪ್ರಾತಿನಿಧ್ಯ ಕೊಟ್ಟಿಲ್ಲ ಆ ಕಾರಣಕ್ಕಾಗಿಯೇ ದಲಿತರು ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿದ್ದಾರೆ ಎಂದು ತಿಳಿಸಿದರು. ಪ್ರಜಾಪ್ರಭುತ್ವವಾದಿಯಾದ ಡಾ. ಬಿ.ಆರ್ ಅಂಬೇಡ್ಕರ್‌ರವರು ಭಾರತದ ಪೌರತ್ವವನ್ನು ಕುರಿತು ಹೀಗೆ ಪ್ರತಿಪಾದಿಸಿದರು.

(1)ಹಕ್ಕುಗಳ ಪಟ್ಟಿ (2)ವಯಕ್ತಿಕವಾದ ಸ್ವಾತಂತ್ರ್ಯ (3)ಭದ್ರತೆ (4)ಆಸ್ತಿಯ ಹಕ್ಕು

(5)ಆಡಳಿತದಲ್ಲಿ ಪ್ರಾತನಿಧ್ಯ (6)ಸಾಮಾಜಿಕ ನ್ಯಾಯ (7)ಸಮಾನತೆ (8)ಅಭಿಪ್ರಾಯ ಸ್ವಾತಂತ್ರ್ಯ (9) ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ (10)ಸಂಘಟನಾ ಸ್ವಾತಂತ್ರ್ಯ ಈ ಮೇಲಿನ ಎಲ್ಲಾ ಮೂಲಭೂತ ಹಕ್ಕುಗಳನ್ನು ಒದಗಿಸುವುದು ಅವಶ್ಯಕ ಎಂದು ಪ್ರತಿಪಾದಿಸಿದರು. ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಜಾತಿ ಆಧಾರತವಾಗಿ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂಬ ಅಂಬೇಡ್ಕರ್ ಪ್ರತಿಪಾದನೆಯನ್ನು ಸೌತ್ ಬರೋ ಸಮಿತಿಯ ಬಹುತೇಕ ಸದಸ್ಯರು ಅರ್ಥ ಮಾಡಿಕೊಂಡರು. ಭಾರತದ ಪ್ರಜೆಗಳಿಗೆ ಸಮಾನ ರಾಜಕೀಯ ಸೌಲಭ್ಯಗಳನ್ನು ನೀಡುವುದು ಉತ್ತಮವೆಂದು ಅದನ್ನು ಸೌತ್ ಬರೋ ಸಮಿತಿ ಹೊಂದಲು ಅಂಬೇಡ್ಕರ್ ಬಹಳಷ್ಟು ಶ್ರಮಿಸಿದರು. ಇವರ ಪ್ರಜಾಪ್ರಭುತ್ವದ ರಾಜಕೀಯ ಬೇಡಿಕೆಯ ಕುರಿತು ಸೌತ್ ಬರೋ ಸಮಿತಿಯು ಸಕಾರಾತ್ಮಕವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿತು.

**ಸೈಮನ್ ಆಯೋಗ–1918**

ಬ್ರಿಟೀಷರ ಅಧಿಕಾರವಧಿಯಲ್ಲಿ 1919ರ ಮಾಂಟೆಗೋ ಚೆಮ್ಸ್‌ಪೋರ್ಡ್ ಅಧಿನಿಯಮವು ಭಾರತ ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಪರಿಶೀಲಿಸಲು ಮತ್ತು ಸ್ವಯಂ ಆಡಳಿತ ನೀಡಲು ಈ ಕಾಯ್ದೆಯ ಸೆಕ್ಷನ್ 84ರ ಪ್ರಕಾರ ಈ ಆಯೋಗವನ್ನು ನೇಮಿಸಲಾಯಿತು. ಬ್ರಿಟೀಷ್ ಸರ್ಕಾರವು ಭಾರತದ ರಾಜಕೀಯ ಇತಿಹಾಸದಲ್ಲೇ ಜಾನ್ ಸೈಮನ್‌ರವನ್ನು ದಿನಾಂಕ 8–11–1927ರಂದು ಏಳು ಜನರನ್ನು ಒಳಗೊಂಡ ಆಯೋಗವನ್ನು ರಚನೆ ಮಾಡಿತು. ಈ ಆಯೋಗವು ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ 18 ನಿಮ್ನ ವರ್ಗಗಳ ಸಂಘಟನೆಗಳು ಆಧಾರಗಳನ್ನು ನೀಡಿದವು. ಅದರಲ್ಲಿ 16 ಸಂಘಟನೆಗಳು ಪ್ರತ್ಯೇಕ ಚುನಾಯಿತ ಕ್ಷೇತ್ರಗಳನ್ನು ನಿಮ್ನ ವರ್ಗಗಳಿಗೆ ಕೊಡಬೇಕೆಂದು ಈ ಸಮಿತಿಗೆ ಆಗ್ರಹಿಸಿದವು. ಡಾ. ಬಿ.ಆರ್ ಅಂಬೇಡ್ಕರ್‌ರವರು ಬಹಿಷ್ಕøತ ಹಿತಕಾರಿಣೀ ಸಭಾದ ಪರವಾಗಿ ದಿನಾಂಕ 29/5/1929ರಂದು ಸೈಮನ್ ಆಯೋಗದ ಮುಂದೆ 39 ಪುಟಗಳ ಮನವಿ ಪತ್ರವನ್ನು ಬಾಂಬೆಯಲ್ಲಿ ಸಲ್ಲಿಸಿದರು.

ಬ್ರಿಟೀಷ್ ಸರ್ಕಾರವು ಭಾರತದಲ್ಲಿ ಯಾವ ಕ್ರಮದಾದ ರಾಜಕೀಯ ಆಡಳಿತ ಮತ್ತು ಸ್ವಯಂ ಅಧಿಕಾರವನ್ನು ನೀಡಬೇಕು ಎಂಬುದನ್ನು ಕುರಿತು ಅಧ್ಯಯನ ಮಾಡಲು ಸೈಮನ್ ಆಯೋಗವು 1928ರಲ್ಲಿ ಮುಂಬೈಗೆ ತಲುಪಿದರು. ಇವರುಗಳು ಭಾರತದ ರಾಜ್ಯ ಕಾರ್ಯದರ್ಶಿಯಾಗಿದ್ದ "ಬರ್ಕನ್ ಹೆಡ್"ರವರು ಸರ್ವ ಪಕ್ಷಗಳಿಗೆ ಒಪ್ಪಿಗೆಯಾಗುವಂತೆ ಭಾರತದಲ್ಲಿ ಸಂವಿಧಾನವನ್ನು ರಚಿಸಲು ಯಾರೂ ಅರ್ಹತೆ ಇಲ್ಲವೆಂದು ತಿಳಿಸಿದರು.

ಡಾ. ಬಿ.ಆರ್ ಅಂಬೇಡ್ಕರ್‌ರವರು ಬಹಿಷ್ಕøತ ಹಿತಕಾರಿಣಿ ನಾಯಕರಾಗಿ ಮುಂಬೈ ವಿಧಾನ ಸಭೆಯಲ್ಲಿನ 140 ಸ್ಥಾನಗಳಲ್ಲಿ 22 ಸ್ಥಾನಗಳನ್ನು ನಿಮ್ನ ವರ್ಗದವರಿಗೆ ಕಾಯ್ದಿರಿಸಬೇಕೆಂದು ಕೇಳಿದರು. ಮತ್ತು ನಾಮಕರಣ ವಿಧಾನವನ್ನು ವಿರೋಧಿಸಿದರು, ಈ ಆಯೋಗವು ಈ ಕೆಳಕಂಡವುಗಳನ್ನು ಬ್ರಿಟೀಷ್ ಸರ್ಕಾರಕ್ಕೆ ಶಿಫಾರಸ್ಸು ಮಾಡಿದವು.

1. ಅಸ್ಪøಶ್ಯರಿಗೆ ಶಿಕ್ಷಣ ವ್ಯವಸ್ಥೆ 2. ವಿದ್ಯಾರ್ಥಿ ನಿಲಯಗಳು 3. ಉದ್ಯೋಗ ಅವಕಾಶಗಳು 4. ವಸತಿ ಸೌಲಭ್ಯ 5. ಸಮಾನತೆ

ಹಾಗೆಯೇ ಡಾ. ಬಿ.ಆರ್ ಅಂಬೇಡ್ಕರ್‌ರವರು ಮಂಡಿಸಿದ ಹಲವಾರು ವಿಚಾರಧಾರೆಗಳನ್ನು ಮುಂದೆ ಬರುವ ದುಂಡು ಮೇಜಿನ ಸಮ್ಮೇಳನಗಳಲ್ಲಿ ಗಂಭೀರ ಚರ್ಚೆಗೆ ಒಳಪಡಿಸುತ್ತೇನೆ ಎಂದು ತಿಳಿಸಿದರು.

**ದುಂಡು ಮೇಜಿನ ಸಭೆಗಳು**

ಇಡೀ ಭಾರತ ದೇಶದಲ್ಲಿ ಶತ-ಶತಮಾನಗಳಿಂದಲೂ ಎಲ್ಲಾ ರೀತಿಯ ಸೌಲಭ್ಯ ವಂಚಿತರಾದ ನಿಮ್ನ ವರ್ಗದವರಿಗೆ ಅಂದೊಂದು ಅಭೂತಪೂರ್ವವಾದ ಸಂದರ್ಭವಾಗಿತ್ತು. ಇಂಗ್ಲೆಂಡ್ ಮತ್ತು ಭಾರತ ಎರಡೂ ದೇಶಗಳ ಪಾಲಿಗೆ ದುಂಡು ಮೇಜಿನ ಪರಿಷತ್ತು ಎಂಬುದು ಅತ್ಯಂತ ಮುಖ್ಯವಾದಂತಹ ಘಟ್ಟವಾಗಿತ್ತು. ನಿಮ್ನ ವರ್ಗಗಳ ಹಕ್ಕುಗಳಿಗಾಗಿ ಬ್ರಿಟೀಷರಿಂದ ಅತ್ಯಂತ ಮೇಧಾವಿ ಮತ್ತು ಪ್ರಭಾವಶಾಲಿ ದಲಿತ ನಾಯಕರಾದ ಡಾ. ಬಿ.ಆರ್ ಅಂಬೇಡ್ಕರ್‌ರವನ್ನು ಅಯ್ಕೆ ಮಾಡಲಾಯಿತು. ಇದೊಂದು ಇಡೀ ದಲಿತ ಸಮುದಾಯಕ್ಕೆ ತುಂಬಾ ಸಂತೋಷ ಮತ್ತು ಹೆಮ್ಮೆಯ ವಿಷಯವಾಗಿತ್ತು.

ಭಾರತದ ಹೋರಾಟದ ಇತಿಹಾಸದಲ್ಲಿ ದುಂಡು ಮೇಜಿನ ಪರಿಷತ್ತು ಸಂವಿಧಾನದ ರಚನೆಗೆ ಮತ್ತು ನಿಮ್ನ ವರ್ಗದವ ಹಕ್ಕುಗಳಿಗೆ ಪ್ರಾತಿನಿಧ್ಯ ನೀಡಲು ಬ್ರಿಟೀಷ್ ಸರ್ಕಾರವು ಭಾರತದ ವಿವಿಧ ಕೋಮಿನ ನಾಯಕರನ್ನು ಆಹ್ವಾನಿಸಿತು.

**ಮೊದಲನೇ ದುಂಡು ಮೇಜಿನ ಸಭೆ**

ಮೊದಲನೆಯ ದುಂಡು ಮೇಜಿನ ಪರಿಷತ್ತು ನವೆಂಬರ್ 12. 1930ರಂದು ಬ್ರಿಟನ್ನಿನ ದೊರೆ ಉದ್ಘಾಟಿಸಿದರು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ರಾಮ್ಸೆ ಮ್ಯಾಕ್‌ಡೊನಾಲ್ಡ್ ವಹಿಸಿದ್ದರು. ಈ ಸಭೆಯಲ್ಲಿ ಒಟ್ಟು 89 ಪ್ರತಿನಿಧಿಗಳು ಭಾಗವಹಿಸಿದ್ದರು. ಹಿಂದೂ, ಮುಸ್ಲಿಂ, ಸಿಖ್, ಕ್ರಿಶ್ಚಿಯನ್, ಪರಿಶಿಷ್ಟ ಜಾತಿಗೆ ಸೇರಿದ ಪ್ರತಿನಿಧಿಗಳಲ್ಲದೇ ಭೂ ಮಾಲಿಕರು, ವ್ಯಾಪರಸ್ಥರು, ಶ್ರೀಮಂತರು ಹಾಗೂ ಇತರೆ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಆದರೆ ಕಾಂಗ್ರೆಸ್ಸಿನ ಯಾವ ಪ್ರತಿನಿಧಿಯೂ ಸಹಾ ಹಾಜರಗಿರಲಿಲ್ಲ. ಪರಿಷತ್ತಿನಲ್ಲಿ ನಿಮ್ನ ವರ್ಗಗಳ ಪರವಾಗಿ ಡಾ. ಬಿ.ಆರ್ ಅಂಬೇಡ್ಕರ್ ಮತ್ತು ರಾವ್ ಬಹದ್ದೂರ್ ಶ್ರೀನಿವಾಸನ್ ಉಪಸ್ಥಿತರಿದ್ದರು. ದಿನಾಂಕ 20-11-1930ರಂದು ಸಮ್ಮೇಳವನ್ನು ಉದ್ದೇಶಿಸಿ ಡಾ.ಬಿ.ಆರ್ ಅಂಬೇಡ್ಕರ್‌ರವರು ಮಾತನಾಡಿದರು. ಅದು ಸರ್ವ ಸಭೆಯ 5ನೇ ಸಭೆಯಾಗಿತ್ತು. ಭಾರತದಲ್ಲಿ ನಿಮ್ನ ವರ್ಗದವರ ರಾಜಕೀಯ ಅವಶ್ಯಕತೆ ಕುರಿತು ತಮ್ಮ ವಿಚಾರವನ್ನು ಮಂಡಿಸಲು ಆರಂಭಿಸಿದರು. ಗಡಸು ಧ್ವನಿಯಲ್ಲಿ ಪ್ರವಾದಿಯ ಧಾಟಿಯಲ್ಲಿ "ಬ್ರಿಟೀಷರು ಭಾರತಕ್ಕೆ ಬರುವ ಮುಂಚೆ ಭಾರತದ ನಿಮ್ನ ವರ್ಗಗಳು ಯಾವ ಸ್ಥಿತಿಯಲ್ಲಿ ಇದ್ದವೋ, ಬಹುತೇಕವಾಗಿ ಅದೇ ಸ್ಥಿತಿಯಲ್ಲಿ ಬ್ರಿಟೀಷ್ ಆಡಳಿತದಲ್ಲೂ ಇವೆ. ಅಂದ ಮೇಲೆ ಬ್ರಿಟೀಷರ ಆಡಳಿತವನ್ನು ಏಕೆ ಸಹಿಸಿಕೊಳ್ಳಬೇಕು? ಮೊದಲು ನಾವು ಸಾರ್ವಜನಿಕ ಸ್ಥಳಗಳಿಂದ ನೀರನ್ನು ತೆಗೆದುಕೊಳ್ಳುವ ಹಾಗಿರಲಿಲ್ಲ. ಬ್ರಿಟೀಷ್ ಆಡಳಿತ ಆದರೂ ನಮಗೆ ಸಾರ್ವಜನಿಕ ಸ್ಥಳಗಳಲ್ಲಿ ನೀರು ಸಿಗುತ್ತಿಲ್ಲ. ನೀರು ಕುಡಿದು ಬದುಕುವ ಹಕ್ಕನಾದರೂ ಬ್ರಿಟೀಷರೂ ನಮಗೆ ಕೊಡಿಸಿದರೇ? ಮೊದಲು ನಮಗೆ ಮಂದಿರಗಳಲ್ಲಿ ಪ್ರವೇಶ ಸಿಗುತ್ತಿರಲಿಲ್ಲ, ಈಗಲೂ ಸಿಗುತ್ತಿಲ್ಲ, ಮುಂಚೆಯೂ ನಮ್ಮನ್ನು ಆಡಳಿತ ವ್ಯವಸ್ಥೆಯಲ್ಲಿ ನೇಮಕ ಮಾಡುತ್ತಿರಲಿಲ್ಲ. ಈಗಲೂ ಮಾಡಿಕೊಳ್ಳುತ್ತಿಲ್ಲ. ಪೊಲೀಸ್-ಮಿಲಿಟರಿ ಸೇವೆಯಿಂದ ನಮ್ಮನ್ನು ದೂರ ಇಡಲಾಗಿದೆ. ಇಷ್ಟೆಲ್ಲಾ ಸತ್ಯ ಕಣ್ಣಿಗೆ ರಾಚುತ್ತಿರುವಾಗ, ನಾವು ಹೇಗೆ ತಾನೇ ಬ್ರಿಟೀಷರ ಆಡಳಿತದ ಮೇಲೆ ನಂಬಿಕೆ ಇಡಲು ಸಾಧ್ಯ? ಆದ್ದರಿಂದ ಬ್ರಿಟೀಷ್ ಆಡಳಿತ ಭಾರತದಲ್ಲಿ ಕೊನೆಗೊಳ್ಳಲೇಬೇಕು, ನಿಮ್ನ ವರ್ಗಗಳು ತಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳುತ್ತೇವೆ ಎಂದು ಹೂಂಕರಿಸಿದರು. ಬ್ರಿಟೀಷ್ ಭಾರತೀಯ ಸಮಾಜ ನಿಮ್ನ ವರ್ಗದವರಿಗೆ ಅವಶ್ಯಕ ಸಾಮಾನ್ಯ ನಾಗರೀಕ ಹಕ್ಕುಗಳನ್ನು ಸಹ ನಿರಾಕರಿಸಿದೆ, ತನ್ನ ಅಸ್ತಿತ್ವದ ಹೋರಾಟದಲ್ಲಿ ತುಂಬಾ ಸಮಸ್ಯೆಗಳನ್ನು ಎದುರಿಸುತ್ತಿರುವ ಅಸ್ಪೃಶ್ಯರ ಸಮಸ್ಯೆಗಳಿಗೆ ರಾಜಕೀಯ ಪ್ರಾತಿನಿಧ್ಯತೆಯ ಮೂಲಕ ಪರಿಹಾರವನ್ನು ಒದಗಿಸಬಹುದು ಎಂದು ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

ಅಂಬೇಡ್ಕರ್‌ರವರು ತಮ್ಮ ದಲಿತ ಸಮುದಾಯದ ಹಕ್ಕು ಭಾದ್ಯತೆಗಳಿಗಾಗಿ ಒತ್ತಾಯಿಸಿ, ಅಸ್ಪೃಶ್ಯರ ಸ್ಥಿತಿಗತಿಗಳ ಬಗೆಗೆ ಬಹಳ ಗಂಭಿರವಾಗಿ ಮಾತನಾಡಿ ತಮ್ಮ ಜನಾಂಗದ ಸಮಸ್ಯೆಗಳತ್ತ ಸರ್ಕಾರದ ಗಮನ ಸೆಳೆದರು. ಸಭೆಯಲ್ಲಿ ಅಂಬೇಡ್ಕರರು ಮಾತನಾಡುತ್ತಾ "Mr. Chairman, I and My colleague, Sir, Rao Bahaddur Sreenivasan have the honour to represent regarding the question of constitutionl reform. It is a point of view of 43,000,000 people or one fifth of the total population of British India" ಎಂದು ದಲಿತರ ಪರ ವಾದವನ್ನು ಮಡಿಸುತ್ತಾರೆ. ಅಂಬೇಡ್ಕರ್‌ರವರು ತಮ್ಮ ಭಾಷಣದ ಉದ್ದಕ್ಕೂ ಸವರ್ಣೀಯ ಹಿಂದುಗಳಿಂದ ದಲಿತರು ಹೇಗೆ ಶತಶತಮಾನದಿಂದ ಅವಮಾನ, ನೋವು ಮತ್ತು ಶೋಷಣೆಗೊಳಗಾಗಿದ್ದಾರೆ ಎಂದು ಎಲ್ಲರ ಮನ ಮುಟ್ಟುವಂತೆ ವಿವರಿಸಿದರು

ಡಾ. ಬಿ.ಆರ್ ಅಂಬೇಡ್ಕರ್ ಮತ್ತು ರಾವ್ ಬಹದ್ದೂರ್ ಆರ್ ಶ್ರೀನಿವಾಸನ್‌ರವರು ಒಂದು ಮೆಮೊರಂಡಮ್‌ನ್ನು (Scheme of political safeguards for the protection of the depressed class in the future constitution of a self governing India) ಮೊದಲ ದುಂಡು ಮೇಜಿನ ಪರಿಷತ್ತಿಗೆ ಸಲ್ಲಿಸುತ್ತಾರೆ. ಭಾರತಕ್ಕೆ ಸ್ವತಂತ್ರ ಕೊಡುವ ಮುಂಚೆ ದಲಿತರ ಈ ಕೆಳಗಿನ ಷರತ್ತುಗಳನ್ನು ಸರ್ಕಾರ ಒಪ್ಪಬೇಕೆಂದು ಅಂಬೇಡ್ಕರ್‌ರವರು ಒತ್ತಾಯಿಸುತ್ತಾರೆ, ಅವು ಕೆಳಗಿನಂತಿವೆ.

1. ಸಮಾನ ಪೌರತ್ವ-ಅಸ್ಪೃಶ್ಯತಾ ನಿವಾರಣಾ ಕಾಯ್ದೆಗೆ ಒತ್ತಾಯ.
2. ಶಾಸನ ಸಭೆಗಳಲ್ಲಿ ದಲಿತರಿಗೆ ಪ್ರಾತಿನಿಧ್ಯ
3. ಪ್ರತ್ಯೇಕ ಸಚಿವ ಮತ್ತು ಸಚಿವಾಲಯಕ್ಕೆ ಆಗ್ರಹ
4. ಸಚಿವ ಸಂಪುಟಗಳಲ್ಲಿ ದಲಿತರಿಗೆ ಪ್ರಾತಿನಿಧ್ಯ
5. ಸಾರ್ವತ್ರಿಕ ಮತದಾನದ ಹಕ್ಕು

ಇಷ್ಟೆಲ್ಲಾ ವಾದವನ್ನು ಮಂಡಿಸಿ ಬೇಡಿಕೆಗಳನ್ನು ಸಮಿತಿಯ ಮುಂದೆ ಇಟ್ಟರು. ಇದನ್ನು ಆಲಿಸಿದ ಉಪಸಮಿತಿ ಜನವರಿ 19, 1931ರಂದು ಅನುಮೋದಿಸುತ್ತಾರೆ ಪ್ರಾತಿನಿಧ್ಯ ಕಲ್ಪಿಸುವ ಸ್ಥಳಗಳನ್ನು ಕಾಯ್ದಿರಿಸಬೇಕು. ಕೋಮು ಪ್ರತಿನಿಧ್ಯ ಸಾಧಿಸಲು 3 ಮುಖ್ಯ ಸಾಧನಗಳನ್ನು ಅನುಮೋದಿಸಿತು.

- ನಾಮ ನಿರ್ದೇಶನ
- ಮೀಸಲಾತಿಯ ಅನ್ವಯ ಜಂಟಿ ಮತಕ್ಷೇತ್ರ
- ಪ್ರತ್ಯೇಕ ಮತಕ್ಷೇತ್ರ

**ಎರಡನೇ ದುಂಡು ಮೇಜಿನ ಸಭೆ**

ಎರಡನೇ ದುಂಡು ಮೇಜಿನ ಪರಿಷತ್ತಿಗೆ ಹಾಜರಾಗಬೇಕಾದ ಎಲ್ಲಾ ಪ್ರತಿನಿಧಿಗಳ ಹೆಸರನ್ನು ಬ್ರಿಟೀಷ್ ಸರ್ಕಾರ 1932ರ ಜುಲೈನಲ್ಲಿ ಪ್ರಕಟಿಸಿತು. 1932ರ ಸೆಪ್ಟಂಬರ್ 7 ರಿಂದ ಒಂದನೇ ಡಿಸೆಂಬರ್‌ವರೆಗೆ ಎರಡನೇ ದುಂಡು ಮೇಜಿನ ಪರಿಷತ್ ನಡೆಯಿತು. ಡಾ.ಬಿ.ಆರ್ ಅಂಬೇಡ್ಕರ್‌ರವರು ಮಾತನಾಡುತ್ತಾ ಬ್ರಿಟೀಷ್ ಭಾರತದ ಆಡಳಿತ ವ್ಯವಸ್ಥೆಯಲ್ಲಿ ನಿಮ್ನ ವರ್ಗದವರಿಗೆ ರಾಜಕೀಯದಲ್ಲಿ ಸರಿಯಾದ ಪ್ರಾತಿನಿಧ್ಯ ಸಿಕ್ಕಿಲ್ಲ, ಬ್ರಿಟೀಷ್ ಸರ್ಕಾರ ಕೇವಲ ಸವರ್ಣೀಯರಿಗೆ ಪ್ರಾತಿನಿಧ್ಯ ಒದಗಿಸಿದೆ. ಆದರೆ ದಲಿತರನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಎಂದು ದೂರುತ್ತಾರೆ.

ದಲಿತರ ಪ್ರತಿಧ್ವನಿ ಡಾ.ಬಿ.ಆರ್ ಅಂಬೇಡ್ಕರ್ ದಲಿತರಿಗೆ ಪ್ರತ್ಯೇಕ ಮತದಾನ ಕ್ಷೇತ್ರವನ್ನು ಕೇಳಿದೊಡನೆಯೇ ಗಾಂಧಿ ಮತ್ತು ಸವರ್ಣೀಯರು ವಿರೋಧಿಸುತ್ತಾರೆ. ಅಂಬೇಡ್ಕರು "ಅಸ್ಪೃಶ್ಯರು ಮತ್ತು

ಆದಿವಾಸಿಗಳು ಹಿಂದೂಗಳಲ್ಲ. ಅವರೊಂದು ಪ್ರತ್ಯೇಕ ಸಮುದಾಯ ಹಾಗಾಗಿ ಅವರಿಗೆ ತಮ್ಮ ಪ್ರತಿನಿಧಿಗಳನ್ನು ತಾವೇ ಆರಿಸಿಕೊಳ್ಳುವಂತಹ ಪ್ರತ್ಯೇಕ ಚುನಾಯಕಗಳನ್ನು ನೀಡಬೇಕು, ಮಂತ್ರಿ ಮಂಡಲದಲ್ಲಿ ಮೀಸಲಾತಿ ಮತ್ತು ಶಿಕ್ಷಣ, ಉದ್ಯೋಗಗಳಲ್ಲಿ ಮೀಸಲಾತಿಯನ್ನು ಜನಸಂಖ್ಯೆಗೆ ಅನುಗುಣವಾಗಿ ನೀಡಬೇಕು" ಎಂದು ಒತ್ತಾಯಿಸಿದ್ದರು. ಅದರೆ ಗಾಂಧಿಯು "ಅಸ್ಪೃಶ್ಯರು ಮತ್ತು ಆದಿವಾಸಿಗಳು ಹಿಂದೂಗಳೇ ಆಗಿರುವುದರಿಂದ ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯ ಅಗತ್ಯವಿಲ್ಲ" ಎಂದು ಹೇಳಿದರು. ಇಂತಹ ಸಂದರ್ಭದಲ್ಲಿ ಬ್ರಿಟೀಷ್ ಸಭೆಯು ಯಾರ ಬೇಡಿಕೆಗಳನ್ನು ಪೂರೈಸಬೇಕೆಂದು ಗೊಂದಲಕ್ಕೆ ಒಳಗಾಗುತ್ತಾರೆ. ಆದರೆ ಈ ಇಬ್ಬರ ಬೇಡಿಕೆಗಳನ್ನು ಆಧರಿಸಿ ನಂತರದಲ್ಲಿ ತಮ್ಮ ತೀರ್ಮಾನವನ್ನು ಪ್ರಕಟಗೊಳಿಸುವುದಾಗಿ ತಿಳಿಸಿದರು. ಇದಕ್ಕೆ ಗಾಂಧಿಯವರು ಒಪ್ಪಿಗೆ ಸೂಚಿಸಿ ಸಹಿಯನ್ನು ಹಾಕಿದರು. ಆನಂತರ ಭಾರತಕ್ಕೆ ಬಂದು ಬ್ರಿಟೀಷರ ವಿರುದ್ಧ "ಅಸಹಕಾರ ಚಳವಳಿ" ಆರಂಭಿಸಿದರು. ಆದ್ದರಿಂದ ಬ್ರಿಟೀಷರು ಗಾಂಧೀಯನ್ನು ಬಂಧಿಸಿ ಪೂನಾ ನಗರದ ಯರವಾಡ ಜೈಲಿನಲ್ಲಿ ಇರಿಸಿದರು.

ಕೊನೆಗೆ ಬ್ರಿಟಿಷರು 1932 ಆಗಸ್ಟ್ 17ರಂದು "ಕೋಮುವಾರು ತೀರ್ಪು"ನ್ನು ಪ್ರಕಟಿಸಿದರು. ಅದರಲ್ಲಿ ಗಾಂಧಿ ಮತ್ತು ಅಂಬೇಡ್ಕರರ ವಾದ-ಪ್ರತಿವಾದಕ್ಕೆ ಮನ್ನಣೆ ನೀಡಿದ ಬ್ರಿಟೀಷ್ ಸರ್ಕಾರವು ನಿಮ್ನ ವರ್ಗಗಳಿಗೆ ಪ್ರತ್ಯೇಕ ಚುನಾಯಕಗಳು ಸಿಗಬೇಕು ಹಾಗೂ ಅವರು ಹಿಂದೂ ಸಮಾಜದಿಂದ ದೂರವೂ ಆಗಬಾರದು ಎಂದು ಅರಿತು **"ವಿಶೇಷ ಚುನಾಯಕ"**ಗಳನ್ನು ನೀಡಿದರು. ಇದರಿಂದ ಅಸ್ಪೃಶ್ಯರಿಗೆ ಎರಡು ಮತದಾನದ ಹಕ್ಕು ದೊರೆಯಿತು. ಡಾ. ಬಿ.ಆರ್. ಅಂಬೇಡ್ಕರ್‌ರವರು ನಿಮ್ನ ವರ್ಗದ ರಾಜಕೀಯ ಪ್ರಾತಿನಿಧ್ಯತೆಗಾಗಿ ಜಾತಿ ಹಿಂದೂ ಮತ್ತು ಕಾಂಗ್ರೆಸ್‌ನೊಂದಿಗೆ ತಮ್ಮ ಅಪ್ರತಿಮ ಬೌದ್ಧಿಕ ಶಕ್ತಿಯ ಸಹಾಯದಿಂದ ವಾದಿಸಿ ನಿಮ್ನ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ ದೊರಕಿಸಿಕೊಡುವಲ್ಲಿ ಯಶಸ್ವಿಯಾದರು.

### ಪೂನಾ ಒಪ್ಪಂದ: ಗಾಂಧಿ ಮತ್ತು ಅಂಬೇಡ್ಕರರ ರಾಜಕೀಯ ಭಿನ್ನಾಭಿಪ್ರಾಯಗಳು

ಗಾಂಧೀಜಿಯವರು ಕೋಮುವಾರು ತೀರ್ಪಿನ ವಿರುದ್ಧವಾಗಿ ಪೂನಾ ನಗರದ ಯರವಾಡ ಜೈಲಿನಲ್ಲಿಯೇ ಸೆಪ್ಟಂಬರ್ 20, 1932ರಂದು ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. ಇಂತಹ ಸಂದರ್ಭದಲ್ಲಿ ಇಡೀ ಭಾರತವೇ ಉದ್ವಿಗ್ನ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ದೇಶದ ಎಲ್ಲೆಡೆ ಚರ್ಚೆ ಏರ್ಪಟ್ಟು ಎಲ್ಲರ ದೃಷ್ಟಿಕೋನ ಪೂನಾ ನಗರದ ಕಡೆಗೆ ತಿರುಗುವಂತೆ ಆಯಿತು. ಗಾಂಧಿಯನ್ನು ಉಳಿಸಲು ಅಂಬೇಡ್ಕರವರ ಮನವೊಲಿಸುವ ಪ್ರಕ್ರಿಯೆಗಳು ನಿರಂತರವಾಗಿ ನಡೆದವು. ಗಾಂಧಿಯವರ ಆರೋಗ್ಯಸ್ಥಿತಿ ಹದಗೆಡುತ್ತಿತ್ತು. ಅಂಬೇಡ್ಕರ್‌ರವರು ನಿಮ್ನ ವರ್ಗದವರ ಹಿತಾಸಕ್ತಿ, ಇನ್ನೊಂದೆಡೆ ಗಾಂಧೀಜಿಯ ಪ್ರಾಣ ರಕ್ಷಣೆಯ ಒತ್ತಡಕ್ಕೆ ಸಿಲುಕಿದರು.

ತಾವು ಕೇಳಿದ್ದ 197 ಸ್ಥಾನಗಳ ಬದಲು 148 ಸ್ಥಾನಗಳಿಗೆ ಅಂಬೇಡ್ಕರ್ ಒಪ್ಪಿದರು. ತಾವು ಕೊಡಲು ಒಪ್ಪಿದ 126 ಕ್ಕಿಂತ 22 ಸ್ಥಾನಗಳನ್ನು ಮಾತ್ರ ಅಂಬೇಡ್ಕರ್ ಹೆಚ್ಚು ಕೇಳಿದ್ದರಿಂದ ಇದಕ್ಕೆ ಕಾಂಗ್ರೆಸ್ ನಾಯಕರೆಲ್ಲಾ ಸಮ್ಮತಿಸಿದರು. ಅಂಬೇಡ್ಕರ್ ಒತ್ತಾಯದಂತೆ ಬ್ರಿಟಿಷ್ ಭಾರತದ ಕೇಂದ್ರ ಶಾಸನ ಸಭೆಯಲ್ಲಿ ಹಿಂದೂಗಳಿದ್ದ ಒಟ್ಟು ಸ್ಥಾನಗಳ ಪೈಕಿ 10ನೇ ಒಂದು ಭಾಗದಷ್ಟು ಸ್ಥಾನಗಳನ್ನು ನಿಮ್ನ ವರ್ಗಗಳಿಗೆ ಬಿಟ್ಟುಕೊಡಲು ಕಾಂಗ್ರೆಸ್ ನಾಯಕರು ಒಪ್ಪಿದರು. ಮೀಸಲು ಸ್ಥಾನಗಳನ್ನು ಮುಂದುವರೆಸಲು ಜನಾಭಿಪ್ರಾಯ ಸಂಗ್ರಹಿಸುವುದಕ್ಕೆ ಅಂಬೇಡ್ಕರ್ ಒಪ್ಪಲಿಲ್ಲ. ಜನಾಭಿಪ್ರಾಯ ನಿಲುವನ್ನು ಒಪ್ಪದೇ ಇರುವುದರಿಂದ ಗಾಂಧೀಜಿ ಒಪ್ಪಂದಕ್ಕೆ ಸಮ್ಮತಿ ಸೂಚಿಸುವುದು ಕಷ್ಟವಾಯಿತು. ಈ ಕೆಲಸವನ್ನು ರಾಜಗೋಪಾಲಚಾರಿ ಒಪ್ಪಿಸುವುದಾಗಿ ಯರವಾಡ ಜೈಲಿಗೆ ಹೋಗಿ ಒಪ್ಪಿಸಿದರು. ಆ ನಂತರ ಎಲ್ಲಾ ಚಟುವಟಿಕೆಗಳು ಬಿರುಸಿನಿಂದ ನಡೆದವು. ಚಕಚಕನೆ ಒಪ್ಪಂದದ ಹೇಳಿಕೆಯನ್ನು ಸಿದ್ಧಪಡಿಸಲಾಯಿತು. ಕಾಂಗ್ರೆಸ್ ವಲಯದಲ್ಲಿ ಅಪಾರ ಸಂತೋಷ ಹಬ್ಬಿತು. ಮದನ ಮೋಹನ ಮಾಳವೀಯರ ಅಧ್ಯಕ್ಷತೆಯಲ್ಲಿ ಸೆಪ್ಟಂಬರ್ 20, 1932ರಂದು ಅಂತಿಮ ತೀರ್ಮಾನ ಕೈಗೊಳ್ಳಲಾಯಿತು. ಹಿಂದೂಗಳ ಪರವಾಗಿ ಮಾಳವೀಯ ಸಹಿಹಾಕಿದರು, ಅಸ್ಪೃಶ್ಯರ ಪರವಾಗಿ ಡಾ. ಬಿ.ಆರ್. ಅಂಬೇಡ್ಕರ್ ಸಹಿ ಹಾಕಿದರು. ಈ ಸಂದಿಗ್ಧ ಪರಿಸ್ಥಿತಿಯನ್ನು ಅಂಬೇಡ್ಕರ್ ಹೀಗೆ ವಿವರಿಸಿದ್ದಾರೆ.

"A few days back no man was placed in a greater dilemma than I. I had to make a choice between two difficult alternatives, there was the life of greatest man of India to be saved, there was also before me the problem to safeguard the interest of my community"

ಹೀಗೆ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ಪ್ರಾರಂಭವಾದಾಗಿನಿಂದಲೂ ಸ್ವತಂತ್ರ್ಯ ಲಭಿಸುವವರೆವಿಗೂ ನಡೆದ ಅಸ್ಪೃಶ್ಯರ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮತ್ತು ಆರ್ಥಿಕ ಪ್ರಾತಿನಿಧ್ಯ ಹಕ್ಕುಗಳಿಗಾಗಿ ನಡೆದ ಹೋರಾಟದಲ್ಲಿ ನಿರಂತರವಾಗಿ ಗಾಂಧಿ ಮತ್ತು ಅಂಬೇಡ್ಕರರ ನಡುವಿನ ಭಿನ್ನಾಭಿಪ್ರಾಯ ಕಂಡು ಬಂದಿದ್ದು, ಡಾ. ಬಿ. ಆರ್. ಅಂಬೇಡ್ಕರ್ ನಿಮ್ನ ವರ್ಗದವರ ಹಕ್ಕುಗಳ ರಕ್ಷಣೆ ಹಾಗೂ ಭಾರತದ ಪ್ರಜಾತಂತ್ರ ವ್ಯವಸ್ಥೆ ರೂಪಿಸಲು ಭಾರತದ ಸಂವಿಧಾನದಲ್ಲಿ ರಕ್ಷಣೆ ನೀಡಲು ನಾಂದಿಯಾಗಿರುವುದನ್ನು ನಾನು ಸ್ಮರಿಸಬಹುದಾಗಿದೆ.

### ಭಾರತದಲ್ಲಿ ಸ್ವತಂತ್ರ ನಂತರದ ರಾಜಕೀಯ ಮೀಸಲಾತಿಯ ಚರ್ಚೆಗಳು

ಪೂನಾ ಒಪ್ಪಂದದ ನಂತರದ ಕಾಲಮಾನದಲ್ಲಿ ಅಸ್ಪೃಶ್ಯರ ರಾಜಕೀಯ ಪ್ರಾತಿನಿಧ್ಯವನ್ನು ನೀಡುವ ಸಲುವಾಗಿ ಅನೇಕ ರೀತಿಯ ಆಯೋಗಗಳು, ಸಮಿತಿಗಳು ರಚನೆಯಾಗಿ 1935ರ ಭಾರತ ಸಂವಿಧಾನ ಕಾಯ್ದೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ರಾಜಕೀಯದಲ್ಲಿ ವಿಶೇಷ ಪ್ರಾತಿನಿಧ್ಯ ನೀಡಲು ಕಾಯ್ದೆಯು ಶಿಫಾರಸ್ಸು ಮಾಡಿತು. ಭಾರತದ ನಿಮ್ನ ವರ್ಗಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ಮತದಾನದ ಹಕ್ಕಿನ ಸೌಲಭ್ಯ ಪಡೆದು ಭಾರತದಲ್ಲಿ ಸರ್ಕಾರ ರಚನೆ ಮಾಡಲು ಅನುವು ಮಾಡಿಕೊಟ್ಟಿತು.

ಈ ಸಂವಿಧಾನ ಕರಡು ರಚನಾ ಸಮಿತಿಯ ಸದಸ್ಯರುಗಳು ದಿನಾಂಕ 30-08-1947ರಂದು ಸಭೆ ಸೇರಿ ಡಾ. ಬಿ.ಆರ್. ಅಂಬೇಡ್ಕರ್‌ರವರನ್ನು ಸರ್ವಾನುಮತದಿಂದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. ಈ ಏಳು ಸದಸ್ಯರ ಪೈಕಿ ಒಬ್ಬರು ರಾಜಿನಾಮೆ ನೀಡಿದರು. ಒಬ್ಬರು ನಿಧನರಾದರು. ಒಬ್ಬರು ವಿದೇಶಕ್ಕೆ ತೆರಳಿದರು, ಇಬ್ಬರು ಅನಾರೋಗ್ಯದ ಕಾರಣದಿಂದ ದೂರ ಉಳಿದರು. ಇನ್ನೊಬ್ಬರು ಸಂಸ್ಥಾನ ರಾಜ್ಯಗಳ (Princely States) ವಿಚಾರದಲ್ಲಿ ಮಗ್ನರಾದರು. ಹೀಗಾಗಿ ಡಾ. ಬಿ.ಆರ್. ಅಂಬೇಡ್ಕರ್‌ರವರು ಏಕಾಂಗಿಯಾಗಿ ಸಂವಿಧಾನ ರಚನಾ ಕಾರ್ಯದ ಜವಾಬ್ದಾರಿಯನ್ನು ನಿರ್ವಹಿಸಬೇಕಾಯಿತು. ಸ್ವತಂತ್ರ ಭಾರತದ ಪ್ರಪ್ರಥಮ ಕಾನೂನು ಸಚಿವರಾಗಿ, ಕರಡು ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿ ಅವರು ಇಡೀ ವಿಶ್ವದಲ್ಲಿ ಭಾರತಕ್ಕೊಂದು ಅನುಪಮವಾದ ಸ್ಥಾನ ಒದಗಿಸಿಕೊಡುವ ಹೊಣೆ ವಹಿಸಿಕೊಂಡರು. ಸಂವಿಧಾನ ಸಭೆ ಎರಡು ವರ್ಷ ಹನ್ನೊಂದು ತಿಂಗಳು ಹದಿನೇಳು ದಿನಗಳ ಕಾಲ

ಚರ್ಚೆಯನ್ನು ನಡೆಸಿತ್ತು. ಒಟ್ಟು 7600 ತಿದ್ದುಪಡಿಗಳನ್ನು ಸೂಚಿಸಲಾಗಿತ್ತು. ಈ ಪೈಕಿ 2473 ತಿದ್ದುಪಡಿಗಳ ಬಗ್ಗೆ ವಿಚಾರ ವಿನಿಮಯ ನಡೆಸಿತ್ತು. ಡಾ. ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನದ ಕರಡು ವಿಧಿಗಳ ಬಗ್ಗೆ ರಚನೆ ಸಮಿತಿಯಲ್ಲಿ ಚರ್ಚಿಸುವಾಗ ಅವರು ಆಗಸ್ಟ್ 24, 1949ರಂದು ಪರಿಶಿಷ್ಟ ಜಾತಿಯ ರಾಜಕೀಯ ಮೀಸಲಾತಿ ಕುರಿತು ಕರಡು ವಿಧಿ 294ನ್ನು ಸಂವಿಧಾನ ರಚನಾ ಸಭೆಯಲ್ಲಿ ಮಂಡಿಸಿದರು.

**294: ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ರಾಜ್ಯ ವಿಧಾನಸಭೆಗಳಲ್ಲಿ ಸ್ಥಾನಗಳನ್ನು ಮೀಸಲಿಡುವುದು.**

ಈ ಕರಡು ವಿಧಿಯ ಪ್ರಕಾರ ದಲಿತ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯವನ್ನು ನೀಡಲು, ರಾಜ್ಯ ರಾಜಕಾರಣದಲ್ಲಿ ಅವರ ಸಹಭಾಗಿತ್ವವನ್ನು ನೀಡಲು ಈ ವಿಧಿಯು ಅವಶ್ಯಕ ಎಂದು ತಿಳಿಸಿರುತ್ತಾರೆ. ಸಮಿತಿಯಲ್ಲಿ ಈ ವಿಧಿಯ ಪರ–ವಿರೋಧಗಳು ಚರ್ಚಿಸಿ ಇಷ್ಟೆಲ್ಲಾ ಚರ್ಚೆಗಳು, ಸಂವಿಧಾನದ ಕರಡು ಸಮಿತಿಯು ರಚನಾ ಸಭೆಯಲ್ಲಿ ವ್ಯಾಪಕ ಚರ್ಚೆಯ ನಂತರ ಭಾರತ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ರಾಜಕೀಯ ಮೀಸಲಾತಿಯನ್ನು ಅಧಿಕೃತವಾಗಿ 330, 332 ಮತ್ತು 334ನೇ ವಿಧಿಗಳಾಗಿ ಜಾರಿಗೊಳಿಸಲಾಗಿದೆ.

1. **330ನೇ ವಿಧಿಯ ಪ್ರಕಾರ:** ಲೋಕಸಭೆಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳನ್ನು ಮೀಸಲಿಡುವುದು.
2. **332ನೇ ವಿಧಿಯ ಪ್ರಕಾರ:** ರಾಜ್ಯ ವಿಧಾನ ಸಭೆಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಸ್ಥಾನ ಮೀಸಲಿಡುವುದು.
3. **334ನೇ ವಿಧಿಯ ಪ್ರಕಾರ:** ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಮೀಸಲು ಕ್ಷೇತ್ರಗಳ ಕಾಲಮಿತಿ 10 ವರ್ಷಗಳಿಗೆ ನಿಗದಿಗೊಳಿಸಲಾಗಿದೆ.

ಈ ರೀತಿಯ ಚರ್ಚೆಗಳ ನಡುವೆ ನಿಮ್ನ ವರ್ಗಗಳಿಗೆ ರಾಜಕೀಯ ಮೀಸಲಾತಿ ದೊರೆತು ಸಂವಿಧಾನಾತ್ಮಕವಾಗಿ, ರಕ್ಷಣಾತ್ಮಕವಾಗಿ ಸಂವಿಧಾನದಲ್ಲಿ ಅಡಕವಾಗಿವೆ.

**ಪ್ರಸ್ತುತ ರಾಜಕೀಯ ಮೀಸಲಾತಿಯ ಕುರಿತು ಸ್ಥಿತಿಗತಿಗಳು**

ಭಾರತದಲ್ಲಿ ರಾಜಕೀಯ ಪ್ರಾತಿನಿಧ್ಯಕ್ಕಾಗಿ ಹಲವಾರು ಹೋರಾಟಗಳ ನಡುವೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಉದ್ದೇಶ ಸಫಲವಾದ ನಂತರ ಅಸ್ಪೃಶ್ಯರು ಮತ ಚಲಾಯಿಸುವ ಮತ್ತು ಚುನಾವಣೆಗೆ ಸ್ಪರ್ಧಿಸಿ ಆಯ್ಕೆಯಾಗುವ ರಾಜಕೀಯ ಹಕ್ಕು ಲಭಿಸಿತು. ಈ ಸೌಲಭ್ಯದಿಂದ ಶೋಷಿತರ ಬದುಕನ್ನು ಸಮಾಜದ ಮುಖ್ಯವಾಹಿನಿಗೆ ತರಲು, ಸಾಮಾಜಿಕ ನ್ಯಾಯ, ಸಾಮಾಜಿಕ ಸಮಾನತೆ ಮತ್ತು ರಾಜಕೀಯ ಸಮಾನತೆಯನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ನೊಂದ ಹೃದಯಗಳಿಗೆ ಪ್ರಾತಿನಿಧ್ಯವನ್ನು ನೀಡಲಾಯಿತು. ಸಂವಿಧಾನದ **334** ನೇ ವಿಧಿಯ ಪ್ರಕಾರ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಮೀಸಲು ಕ್ಷೇತ್ರಗಳ ಕಾಲಮಿತಿ 10 ವರ್ಷಗಳಿಗೆ ನಿಗದಿಗೊಳಿಸಲಾಗಿತ್ತು. ಆದರೇ ಕಾಲಕಾಲಕ್ಕೆ ತಕ್ಕಂತೆ ತಿದ್ದುಪಡಿಗಳ ಮುಖಾಂತರ ಮುಂದುವರಿಸಲಾಗಿದೆ.

1. 1959ರಲ್ಲಿ ಸಂವಿಧಾನದ 8ನೇ ತಿದ್ದುಪಡಿಯ ಪ್ರಕಾರ SC/STಗಳಿಗೆ ರಾಜಕೀಯ ಮೀಸಲಾತಿಯ ಅವಧಿಯನ್ನು 10 ವರ್ಷಗಳಿಂದ 20 ವರ್ಷಗಳಿಗೆ ವಿಸ್ತರಿಸಲಾಯಿತು.
2. 1969ರಲ್ಲಿ ಸಂವಿಧಾನದ 23ನೇ ತಿದ್ದುಪಡಿಯ ಪ್ರಕಾರ SC/STಗಳಿಗೆ ರಾಜಕೀಯ ಮೀಸಲಾತಿಯ ಅವಧಿಯನ್ನು 20 ವರ್ಷಗಳಿಂದ 30 ವರ್ಷಗಳಿಗೆ ವಿಸ್ತರಿಸಲಾಯಿತು.
3. 1980ರಲ್ಲಿ ಸಂವಿಧಾನದ 45ನೇ ತಿದ್ದುಪಡಿಯ ಪ್ರಕಾರ SC/STಗಳಿಗೆ ರಾಜಕೀಯ ಮೀಸಲಾತಿಯ ಅವಧಿಯನ್ನು 30 ವರ್ಷಗಳಿಂದ 40 ವರ್ಷಗಳಿಗೆ ವಿಸ್ತರಿಸಲಾಯಿತು.
4. 1989ರಲ್ಲಿ ಸಂವಿಧಾನದ 62ನೇ ತಿದ್ದುಪಡಿಯ ಪ್ರಕಾರ SC/STಗಳಿಗೆ ರಾಜಕೀಯ ಮೀಸಲಾತಿಯ ಅವಧಿಯನ್ನು 40 ವರ್ಷಗಳಿಂದ 50 ವರ್ಷಗಳಿಗೆ ವಿಸ್ತರಿಸಲಾಯಿತು.
5. 1999ರಲ್ಲಿ ಸಂವಿಧಾನದ 79ನೇ ತಿದ್ದುಪಡಿಯ ಪ್ರಕಾರ SC/STಗಳಿಗೆ ರಾಜಕೀಯ ಮೀಸಲಾತಿಯ ಅವಧಿಯನ್ನು 50 ವರ್ಷಗಳಿಂದ 60 ವರ್ಷಗಳಿಗೆ ವಿಸ್ತರಿಸಲಾಯಿತು.
6. 2010ರಲ್ಲಿ ಸಂವಿಧಾನದ 109ನೇ ತಿದ್ದುಪಡಿಯ ಪ್ರಕಾರ SC/STಗಳಿಗೆ ರಾಜಕೀಯ ಮೀಸಲಾತಿಯ ಅವಧಿಯನ್ನು 60 ವರ್ಷಗಳಿಂದ 70 ವರ್ಷಗಳಿಗೆ ವಿಸ್ತರಿಸಲಾಯಿತು.

ಈ ವ್ಯವಸ್ಥೆಯು ಜನವರಿ 25, 2020 ಕ್ಕೆ ಕೊನೆಗೊಳ್ಳುತ್ತದೆ. ಪ್ರತೀ ಬಾರಿಗೂ ತಿದ್ದುಪಡಿಗಳ ಮೂಲಕ ವಿಸ್ತರಿಸುವಾಗ ಅರ್ಥಪೂರ್ಣವಾದ ಸಮರ್ಥನೆಯನ್ನು ನೀಡಿ ರಾಜಕೀಯ ಮೀಸಲಾತಿಯನ್ನು ಮುಂದುವರಿಸಿರುವುದನ್ನು ನಾವು ನೋಡಬಹುದಾಗಿದೆ.

**ಪ್ರಸ್ತುತ ಮೀಸಲಾತಿ ಕ್ಷೇತ್ರಗಳ ಸ್ಥಾನಗಳ ವಿವರವನ್ನು ಈ ಕೆಳಕಂಡ ಕೊಷ್ಟಕದಲ್ಲಿ ತಿಳಿಯಬಹುದು**

**ಅಖಂಡ ಭಾರತದ ವಿಧಾನಸಭಾ ಕ್ಷೇತ್ರಗಳಲ್ಲಿ ಮೀಸಲಾತಿ ಕ್ಷೇತ್ರಗಳ ಸಂಖ್ಯೆ**

| ಕ್ಷೇತ್ರಗಳು | SC | ST | ಒಟ್ಟು |
|---|---|---|---|
| ಮೀಸಲಾತಿ ಕ್ಷೇತ್ರಗಳ ಸಂಖ್ಯೆ | 624 | 554 | 1178 |

ಭಾರತ ದೇಶದ ಒಟ್ಟು 29 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಸೇರಿ ಇರುವ ಒಟ್ಟು 4,116 ವಿದಾನಸಭ ಕ್ಷೇತ್ರಗಳಲ್ಲಿ ಪರಿಶಿಷ್ಟಜಾತಿಗೆ 624 ಮತ್ತು ಪರಿಶಿಷ್ಟ ಪಂಗಡಕ್ಕೆ 554 ಕ್ಷೇತ್ರಗಳು ಮೀಸಲಾಗಿವೆ.

**ಕರ್ನಾಟಕ ವಿಧಾನಸಭಾ ಕ್ಷೇತ್ರಗಳಲ್ಲಿ ಮೀಸಲಾತಿ ಕ್ಷೇತ್ರಗಳು**

| ಕ್ಷೇತ್ರಗಳು | SC | ST | TOTAL |
|---|---|---|---|
| ಮೀಸಲಾತಿ ಕ್ಷೇತ್ರಗಳ ಸಂಖ್ಯೆ | 36 | 15 | 51 |

ಕರ್ನಾಟಕದ ಒಟ್ಟು 30 ಜಿಲ್ಲೆಗಳಲ್ಲಿ ಇರುವ ಒಟ್ಟು 224 ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿಗೆ 36 ಮತ್ತು ಪರಿಶಿಷ್ಟ ಪಂಗಡಕ್ಕೆ 15 ಕ್ಷೇತ್ರಗಳು ಮೀಸಲಾಗಿವೆ.

**ಅಖಂಡ ಭಾರತದ ಲೋಕಸಭಾ ಮೀಸಲು ಕ್ಷೇತ್ರಗಳ ಸಂಖ್ಯೆಗಳ ವಿವರ**

| ಕ್ಷೇತ್ರಗಳು | SC | ST | TOTAL |
|---|---|---|---|
| ಮೀಸಲಾತಿ ಕ್ಷೇತ್ರಗಳ ಸಂಖ್ಯೆ | 84 | 47 | 131 |

ಭಾರತ ದೇಶದ ಒಟ್ಟು 29 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಸೇರಿ ಇರುವ ಒಟ್ಟು 543 ಲೋಕಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟಜಾತಿಗೆ 84 ಮತ್ತು ಪರಿಶಿಷ್ಟ ಪಂಗಡಕ್ಕೆ 47 ಕ್ಷೇತ್ರಗಳು ಮೀಸಲಾಗಿವೆ.

**ಕರ್ನಾಟಕ ಲೋಕಸಭಾ ಮೀಸಲು ಕ್ಷೇತ್ರಗಳ ಸಂಖ್ಯೆಗಳ ವಿವರ**

| ಕ್ಷೇತ್ರಗಳು | SC | ST | TOTAL |
|---|---|---|---|
| ಮೀಸಲಾತಿ ಕ್ಷೇತ್ರಗಳ ಸಂಖ್ಯೆ | 05 | 02 | 07 |

ಕರ್ನಾಟಕ ಲೋಕಸಭಾ ಕ್ಷೇತ್ರಗಳಲ್ಲಿ ಇರುವ ಒಟ್ಟು 28 ಲೋಕಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿಗೆ 05 ಮತ್ತು ಪರಿಶಿಷ್ಟ ಪಂಗಡಕ್ಕೆ 02 ಕ್ಷೇತ್ರಗಳು ಮೀಸಲಾಗಿವೆ.

**ಉಪಸಂಹಾರ**

ಇಂದು ಭಾರತದಾದ್ಯಂತ ಪ್ರಮುಖವಾಗಿ ಮೂರು ಬಗೆಯ ಮೀಸಲಾತಿಗಳನ್ನು ನೋಡಬಹುದು ಅವುಗಳೆಂದರೆ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಮೀಸಲಾತಿಗಳು. ಇವುಗಳಲ್ಲಿ ರಾಜಕೀಯ ಮೀಸಲಾತಿಯನ್ನು ಹೊರತುಪಡಿಸಿ ಅತಿ ಹೆಚ್ಚು ಚರ್ಚೆಗೊಳಗಾಗುತ್ತಿರುವ ವಿಷಯಗಳಲ್ಲಿ 'ಶಿಕ್ಷಣ ಮತ್ತು ಉದ್ಯೋಗ ಮೀಸಲಾತಿ'. ರಾಜಕೀಯ ಮೀಸಲಾತಿಯ ಬಗ್ಗೆ ಯಾವುದೇ ಚರ್ಚೆಗಳು ನಡೆದಿರುವುದಿಲ್ಲ, ಆದರೇ ರಾಜಕೀಯ ಮೀಸಲಾತಿಯ ಸೌಲಭ್ಯವನ್ನು ಪಡೆದ ದಲಿತ ರಾಜಕೀಯ ನಾಯಕರು ತಮ್ಮ ಸ್ವಹಿತಾಶಕ್ತಿ ಮತ್ತು ಇಂದಿನ ಜಾಗತಿಕ ಉದ್ಯಮಶೀಲರಾಗಿ ರೂಪುಗಳ್ಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಹಣದ ಮುಂದೆ ತಮ್ಮ ಸಿದ್ಧಾಂತ, ವೈಚಾರಿಕತೆ, ಜ್ಯಾತ್ಯಾತೀತ ಮೌಲ್ಯಗಳು ಇವುಗಳನೆಲ್ಲಾ ಬದಿಗೊತ್ತಿ ತಮ್ಮ ರಾಜಕೀಯದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಕೋಮುಶಕ್ತಿಗಳೊಂದಿಗೆ ಕೈಜೊಡಿಸಿ ಶೋಷಿತರನ್ನು ತಬ್ಬಲಿಗೊಳಿಸಿರುವುದು ಗೋಚರವಾಗುತ್ತಿದೆ. ಮೀಸಲು ಕ್ಷೇತ್ರಗಳಲ್ಲಿ ಆಯ್ಕೆಯಾಗಿ ನೊಂದವರ ಧನಿಯಾಗದೇ, ಬಂಡವಾಳಶಾಹಿಗಳಾಗಿ ರೂಪುಗೊಳ್ಳಲು ಮುಂದಾಗಿದ್ದಾರೆ. ಡಾ.ಬಿ.ಆರ್ ಅಂಬೇಡ್ಕರ್‌ರವರ ಹೋರಾಟದ ಫಲವಾಗಿ ದೊರೆತ ಮತದಾನದ ಹಕ್ಕು ಮತ್ತು ರಾಜಕೀಯ ಪ್ರಾತಿನಿಧ್ಯವನ್ನು ದುರುಪಯೋಗ ಮಾಡಿಕೊಂಡು, ಸ್ವಸಾಮರ್ಥ್ಯದಿಂದ ಚುನಾವಣೆಗಳಲ್ಲಿ ಆಯ್ಕೆಯಾಗದೇ ಪಕ್ಷಗಳ ನೆರವಿನಿಂದ ಹಣ, ಹೆಂಡ ಹಂಚಿ ತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇಂತಹ ವ್ಯವಸ್ಥೆ ಮುಂದುವರಿದರೆ ಮತ್ತು ದಲಿತ ರಾಜಕೀಯ ನಾಯಕರುಗಳು ಎಚ್ಚೆತ್ತುಕೊಳ್ಳದಿದ್ದರೇ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಮೀಸಲಾತಿಗಳು ವಿನಾಶದ ಕಡೆಗೆ ತಿರುಗಿ ಮತ್ತೆ ಶೋಷಣೆ, ಗುಲಾಮಗಿರಿಗೆ ದಲಿತ ಸಮುದಾಯಗಳು ಒಳಗಾಗುವುದರಲ್ಲಿ ಸಂದೇಹವೇ ಇಲ್ಲ.

**ಆಧಾರ ಗ್ರಂಥಗಳು**


1. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಸಮಗ್ರ ಬರಹ ಮತ್ತು ಭಾಷಣಗಳು–ಸಂಪುಟ–1, ಕರ್ನಾಟಕ ಸರ್ಕಾರ.1990
2. ಡಾ. ಶಿವಕುಮಾರ–ಹಿಂದುಳಿದ ಜಾತಿಗಳ ಮೀಸಲಾತಿ–ಪ್ರಬುದ್ಧ ಪ್ರಕಾಶನ–ಮೈಸೂರು, 2016.
3. ಪ್ರೊ.ದಯಾನಂದ ಮಾನೆ– ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿ– ಡಾ.ಬಿ.ಆರ್ ಅಂಬೇಡ್ಕರ್ ರೀಸರ್ಚ್ ಅಕಾಡೆಮಿ–ಮೈಸೂರು– 2013.
4. ಎನ್ ಮಹೇಶ್– ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ – ಎನ್ ಮಹೇಶ್ ಪ್ರಕಾಶನ, 2015.
5. Dr. Ambedkar- Writings and Speeches, Government of Maharastra Publication-1982, Vol-2.
6. Kheer Dhananjay 2003: Dr. Ambedkar Life and Mission, Popular Prakashan, Bombay.
7. S.R Maheshwari- Reservation Policy in India: theory and practice- Indian Journal of Public Administartion-sep-1997
8. Ansari Jamshed-Reservation Policy In India: Problems and Solution-Academe Arena http://www.sciencepub.net/agdama.-2014.